# ಎನ್‌ಐಟಿಕೆಯಲ್ಲಿ ವಾರ್ಷಿಕ ಸಾಂಸ್ಕೃತಿಕ ಉತ್ಸವ 'ಇನ್ಸಿಡೆಂಟ್ 2023'

# ಸಂಸ್ಕೃತಿ ರಕ್ಷಣೆಗೆ ಆದ್ಯತೆ ನೀಡಿ: ಪ್ರಕಾಶ್ ಬೆಳವಾಡಿ



**ಮಂಗಳೂರು:** ಸುರತ್ಕಲ್‌ನ ಎನ್‌ಐಟಿಕೆ ವತಿಯಿಂದ ಹಮ್ಮಿಕೊಂಡಿರುವ ವಾರ್ಷಿಕ ಸಾಂಸ್ಕೃತಿಕ ಉತ್ಸವ 'ಇನ್ಸಿಡೆಂಟ್ 2023'ಗೆ ಸಂಭ್ರಮದ ಚಾಲನೆ ಸಿಕ್ಕಿದೆ.

**ವಿಶೇಷ ಆದ್ಯತೆ ನೀಡಬೇಕು**

ಉದ್ಘಾಟನಾ ಸಮಾರಂಭದಲ್ಲಿ ಪಾಲ್ಗೊಂಡು ಮಾತನಾಡಿದ ಸಿನೆಮಾ ನಟ ಪ್ರಕಾಶ್ ಬೆಳವಾಡಿ, ಮುಂದಿನ ದಿನಗಳಲ್ಲಿ ತಂತ್ರಜ್ಞಾನವು ಬಹುತೇಕ ಎಲ್ಲಾ ಕ್ಷೇತ್ರಗಳಲ್ಲಿ ಪ್ರಾಬಲ್ಯ ಸಾಧಿಸಬಹುದು. ತಂತ್ರಜ್ಞಾನ ಬೆಳೆಯುವುದರೊಂದಿಗೆ ಮಾನವೀಯ ಮೌಲ್ಯಗಳೂ ಬಲಗೊಳ್ಳಬೇಕು. ಯುವಜನತೆ ಮಾನವೀಯತೆಯಿಂದ ದೂರವಾಗಬಾರದು. ಭಾರತೀಯ ಸಂಸ್ಕೃತಿ, ಪರಂಪರೆ ರಕ್ಷಣೆಗೆ ಯುವಜನತೆ ವಿಶೇಷ ಆದ್ಯತೆ ನೀಡಬೇಕು ಎಂದರು.

**ಪರಿಸರ ಸಂರಕ್ಷಿಸಲು ಆದ್ಯತೆ ನೀಡಬೇಕು**

ಸನ್ಮಾನ ಸ್ವೀಕರಿಸಿ ಮಾತನಾಡಿದ ತುಳಸಿಗೌಡ, 'ಪ್ರತಿಯೊಂದು ಜೀವ ಸಂಕುಲಕ್ಕೆ ಶುದ್ಧ ಗಾಳಿ ಮತ್ತು ಹಸಿರು ಪರಿಸರ ಅತ್ಯಂತ ಅವಶ್ಯವಾಗಿದ್ದು, ಯುವ ಪೀಳಿಗೆ ಪರಿಸರವನ್ನು ಸಂರಕ್ಷಿಸಲು ಆದ್ಯತೆ ನೀಡಬೇಕು. ಗಿಡಗಳನ್ನು ನೆಟ್ಟು ಪೋಷಿಸುವ ಕೆಲಸಕ್ಕೆ ಮುಂದಾಗಬೇಕು ಎಂದು ಹೇಳಿದರು.

ಎನ್‌ಐಟಿಕೆ ಸುರತ್ಕಲ್ ಪ್ರಭಾರ ನಿರ್ದೇಶಕ ಪ್ರೊ.ಪ್ರಸಾದ್ ಕೃಷ್ಣ, ಪ್ರೊ.ಜಿ.ಸಿ.ಮೋಹನ್ ಕುಮಾರ್, ಕ್ಷೇಮಪಾಲನಾ ಡೀನ್ ಪ್ರೊ. ನರೇಂದ್ರನಾಥ್, ರಿಜಿಸ್ಟ್ರಾರ್ ಕೆ.ರವೀಂದ್ರನಾಥ್ ಮೊದಲಾದವರು ಉಪಸ್ಥಿತರಿದ್ದರು.

**ಸನ್ಮಾನ**

**ಪದ್ಮಶ್ರೀ ಪ್ರಶಸ್ತಿ ಪುರಸ್ಕೃತ ತುಳಸಿಗೌಡ ಸೇರಿದಂತೆ ಅತಿಥಿಗಳನ್ನು ಸನ್ಮಾನಿಸಲಾಯಿತು. ತುಳಸಿಗೌಡ ಅವರಿಗೆ ಗೌರವದ ಸಂಕೇತವಾಗಿ 50,000 ಮೌಲ್ಯದ ಚೆಕ್‌ನ್ನು ಹಸ್ತಾಂತರಿಸಲಾಯಿತು.**

Udayavani, Date: 19/03/23, p.no -03